ಚಿಕ್ಕೋಡಿ ತಾಲ್ಲೂಕಿನ ಸಂಜಯನಗರ ಹಾಗೂ ಅಂಬೇಡ್ಕರ್ ನಗರ ಅರಣ್ಯ ಪ್ರದೇಶದ ಹಕ್ಕು ಪತ್ರ ನೀಡುವುದು

1275 (1516) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ತಾಲ್ಲೂಕಿನ ಸಂಜಯನಗರ ಹಾಗೂ ಅಂಬೇಡ್ಕರ್ ನಗರ ಅರಣ್ಯ ಪ್ರದೇಶದಲ್ಲಿ 25-30 ವರ್ಷಗಳಿಂದ ವಾಸವಾಗಿರುವ ದುರ್ಬಲ ಜನತೆಗೆ ಹಕ್ಕುಪತ್ರ ನೀಡದೆ ಇರುವುದಕ್ಕೆ ಕಾರಣಗಳೇನು?

ಆ) ಎಷ್ಟು ಸಮಯದೊಳಗೆ ಈ ಜನತೆಗೆ ಹಕ್ಕುಪತ್ರಗಳನ್ನು ವಿತರಿಸಲಾಗುವುದು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅರಣ್ಯ ಸಂರಕ್ಷಣಾ ಕಾಯ್ದೆ 1980ರ ರೀತ್ಯ ದಿನಾಂಕ: 27-4-78ರ ಪೂರ್ವ ದುರ್ಬಲ ಜನರ ಅತಿಕ್ರಮಣವನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರವೂ ಸಹ ಆದೇಶ ಸಂಖ್ಯೆ: ಅಪಜೀ 5 ಎಫ್ ಜಿಎಲ್ 90, ದಿನಾಂಕ : 5-5-97ರಲ್ಲಿ ಕೆಲವು ನಿಬಂಧನೆಗೊಳಪಟ್ಟು ಸಕ್ರಮಗೊಳಿಸಲು ಆದೇಶ ಹೊರಡಿಸಿರುತ್ತದೆ. ಹಕ್ಕುಪತ್ರಗಳನ್ನು ನೀಡಲು ಕಂದಾಯ ಇಲಾಖೆಯು ಕ್ರಮ ತೆಗೆದುಕೊಳ್ಳುತ್ತಿದೆ.

ಆ) ದಿನಾಂಕ: 5-5-97ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ನು ಪೂರೈಸಿಕೊಂಡ ಮೇಲೆ ಕಂದಾಯ ಇಲಾಖೆಯವರು ಪಟ್ಟಾವನ್ನು (ಹಕ್ಕುಪತ್ರ) ವಿತರಿಸುವರು.

ಚಿಕ್ಕೋಡಿ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆಗಳಲ್ಲಿರುವ ಖಾಲಿ ಇರುವ ಹುದ್ದೆಗಳು

1276 (1517) ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ತಾಲ್ಲೂಕಿನ ಪಶುವೈದ್ಯ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇದೆ;

ಆ) ಈ ಹುದ್ದೆಗಳು ಖಾಲಿ ಇರಲು ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನಾ ಹಾಗೂ ಸಕ್ಕರೆ ಸಚಿವರು) :

ಅ) 38

ಆ) 1) ನೌಕರರ ವಯೋಮಿತಿಯ ನಿವೃತ್ತಿಯಿಂದ.

2) ನೌಕರರ ವರ್ಗಾವಣೆಯಿಂದ.